ಕರ್ನಾಟಕ ವಿಧಾನ ಪರಿಷತ್ತು

Starred

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 01 (67) |
| ಮಾನ್ಯ ಸದಸ್ಯರ ಹೆಸರು | ಶ್ರೀ ಆರ್ ಪ್ರಸನ್ನಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 07-12-2020 |
| ಉತ್ತರಿಸುವ ಸಚಿವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಕೋವಿಡ್-19ರ ಹಿನ್ನಲೆಯಲ್ಲಿ ರಾಜ್ಯದ ಸಾರ್ವಜನಿಕ ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆಯಿಂದ ರೋಗಿಗಳಿಗೆ ಸಕಾಲದಲ್ಲಿ ಸರಿಯಾದ ಚಿಕಿತ್ಸೆ ಲಭ್ಯವಾಗದೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಬಂದಿದೆ. |
| ಆ | ಬಂದಿದ್ದಲ್ಲಿ ಖಾಲಿ ಇರುವ ವೈದ್ಯರ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ಜಿಲ್ಲಾವಾರು ಖಾಲಿ ಹುದ್ದೆಗಳ ಮಾಹಿತಿಯನ್ನು ಅನುಬಂಧ-1 ರಲ್ಲಿ ನೀಡಲಾಗಿದೆ. |
| ಇ | ವೈದ್ಯರ ಕೊರತೆ ನೀಗಿಸಲು ಸರ್ಕಾರ ಇದುವರೆಗೂ ಕೈಗೊಂಡ ಕ್ರಮಗಳೇನು? | ರಾಜ್ಯದಲ್ಲಿ ಖಾಲಿ ಇರುವ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ/ ದಂತ ಆರೋಗ್ಯಾಧಿಕಾರಿ/ತಜ್ಞ ವೈದ್ಯರ ಹುದ್ದೆಗಳನ್ನು ವಿಶೇಷ ನೇರ ನೇಮಕಾತಿ ನಿಯಮಗಳ ಮೂಲಕ ಭರ್ತಿ ಮಾಡುವ ಪ್ರಕ್ರಿಯೆ ಚಾಲನೆಯಲ್ಲಿದೆ.<br><br>ಕೋವಿಡ್-19 ಹಿನ್ನೆಲೆಯಲ್ಲಿ ಪ್ರಕರಣಗಳನ್ನು ಸಮರ್ಪಕವಾಗಿ ನಿಭಾಯಿಸಲು ವೈದ್ಯರು/ತಜ್ಞರು ಮತ್ತು ಇತರೆ ಸಿಬ್ಬಂದಿಗಳನ್ನು ತಾತ್ಕಾಲಿಕವಾಗಿ ಗರಿಷ್ಠ 6 ತಿಂಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಈ ಕೆಳಕಂಡ ಆದೇಶಗಳ ಮೂಲಕ ನೇಮಕ ಮಾಡಲಾಗಿದೆ. |

| ಕ್ರ ಸಂ | ವಿವರ | ಆದೇಶ ಸಂಖ್ಯೆ | ಹುದ್ದೆಗಳ ಸಂಖ್ಯೆ (ವೈದ್ಯರು/ ಸಿಬ್ಬಂದಿ) |
|---|---|---|---|
| 1 | ರಾಜ್ಯದ 8 ಜಿಲ್ಲೆಗಳಲ್ಲಿನ ಪ್ರತಿ ಜಿಲ್ಲಾಸ್ಪತ್ರೆಗೆ 45 ಹುದ್ದೆಗಳಂತೆ | ಆಕುಕ 01 ಸಿ & ಆರ್ 2020 | 810 |
| 2 | ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ ಒಟ್ಟು 12 ಆಸ್ಪತ್ರೆಗಳಿಗೆ | ಆಕುಕ 339 ಹೆಚ್ ಎಸ್ ಹೆಚ್ 2020 | 707 |
| 3 | ಇಲಾಖೆಯಲ್ಲಿ ಖಾಲಿ ಇದ್ದ ಶುಶ್ರೂಷಕರು, ಲ್ಯಾಬ್ ಟೆಕ್ನೀಷಿಯನ್, ಫಾರ್ಮಸಿಸ್ಟ್ ಮತ್ತು ಗ್ರೂಪ್-ಡಿ | ಆಕುಕ 01 ಸಿ&ಆರ್ 2020 | - |

| | | | | | |
|---|---|---|---|---|---|
| | | 4 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಐಪಿ ಬೆಂಗಳೂರು ಮತ್ತು ನಿಮ್ಹಾನ್ಸ್ ಬೆಂಗಳೂರು ಇವುಗಳ ನಿಯಂತ್ರಣದಲ್ಲಿರುವ **RTPCR** ಪ್ರಯೋಗಾಲಯಗಳಲ್ಲಿ 03 ಪಾಳಿಯಲ್ಲಿ ಕಾರ್ಯನಿರ್ವಹಿಸಲು | ಆಕುಕ 130 ಎಫ್‌ಪಿಆರ್ 2020 | 66 |
| | | 5 | ಬಿಬಿಎಂಪಿ ವ್ಯಾಪ್ತಿಯಲ್ಲಿನ ಸಂಚಾರಿ ತಂಡಗಳಿಗೆ 400 ಪ್ರಯೋಗಶಾಲಾ ತಂತ್ರಜ್ಞರು ಹಾಗೂ ಪ್ರಾ. ಆ ಕೇಂದ್ರಗಳಿಗೆ 200 ಪ್ರಯೋಗಶಾಲಾ ತಂತ್ರಜ್ಞರು | ಆಕುಕ 01 ಸಿ & ಆರ್ 2020 (ಭಾಗ–1) | 600 |
| | | 6 | ರಾಜ್ಯದಲ್ಲಿನ ವಿವಿಧ ಜಿಲ್ಲೆಗಳಿಗೆ ರ್‍ಯಾಪಿಡ್ ಆಂಟಿಜೆನ್ ಟೆಸ್ಟ್‌ಗಳನ್ನು ನಡೆಸಲು ಮಾದರಿ ಸಂಗ್ರಹಿಸುವುದನ್ನು ಹೆಚ್ಚಿಸಲು 700 ಪ್ರಯೋಗಶಾಲಾ ತಂತ್ರಜ್ಞರು 700 ದತ್ತಾಂಶ ನಮೂದಕರು | ಆಕುಕ 01 ಸಿ & ಆರ್ 2020 | 1400 |
| | | 7 | ಮಾದರಿಯನ್ನು ಸಂಗ್ರಹಿಸುವುದನ್ನು ಮತ್ತಷ್ಟು ಹೆಚ್ಚಿಸಲು ಅನುಕೂಲವಾಗುವಂತೆ 700 ಪ್ರಯೋಗಶಾಲಾ ತಂತ್ರಜ್ಞರ ಜೊತೆಗೆ ಹೆಚ್ಚುವರಿಯಾಗಿ | ಆಕುಕ 01 ಸಿ & ಆರ್ 2020 (ಭಾಗ–1) | 700 |
| | | 8 | ಕೆ ಸಿ ಜನರಲ್ ಸಾರ್ವಜನಿಕ ಆಸ್ಪತ್ರೆ, ಬೆಂಗಳೂರು ಇಲ್ಲಿಗೆ ಕೋವಿಡ್–19 ಪ್ರಕರಣವನ್ನು ನಿಭಾಯಿಸಲು | ಆಕುಕ 401 ಹೆಚ್ ಎಸ್ ಹೆಚ್ 2020 | 163 |
| | | 9 | ಕೋವಿಡ್–19ರ ಸಲುವಾಗಿ ಇಲಾಖೆಯಲ್ಲಿ ಖಾಲಿ ಇರುವ 2196 ಕಿರಿಯ ಮಹಿಳಾ ಆರೋಗ್ಯ ಸಹಾಯಕರ ಹುದ್ದೆಗಳನ್ನು ರೂ.15.000ಗಳ ಮಾಸಿಕ ಸಂಚಿತ ವೇತನದಡಿ | ಆಕುಕ 156 ಹೆಚ್ ಎಸ್ ಎಂ 2020 | 2196 |

ಸಂಖ್ಯೆ: ಆಕುಕ 69 ಹೆಚ್‌ಎಸ್‌ಡಿ 2020

(ಡಾ: ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು

ಅನುಬಂಧ – 1

ತಜ್ಞ ವೈದ್ಯರು/ ಸಾ.ಕ.ವೈ ಹಾಗೂ ದಂತ ಆರೋಗ್ಯಾಧಿಕಾರಿಗಳ ಜಿಲ್ಲಾವಾರು ಖಾಲಿ ಹುದ್ದೆಗಳ ಮಾಹಿತಿ 01.12.2020

| ಕ್ರ ಸಂ | ಜಿಲ್ಲೆಯ ಹೆಸರು | GM | | | GS | | | OBG | | | PAED | | | ANAE | | | OPTHO | | | ORTHO | | | ENT | | | SKIN | | | RADIO | | | PATHO | | | PSY | | | FM | | | NEPHRO / URO | | |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | S | W | V | S | W | V | S | W | V | S | W | V | S | W | V | S | W | V | S | W | V | S | W | V | S | W | V | S | W | V | S | W | V | S | W | V | S | W | V | S | W | V |
| 1 | ಬೆಂಗಳೂರು ನಗರ | 19 | 19 | 0 | 19 | 19 | | 30 | 30 | | 18 | 18 | | 22 | 22 | | 10 | 10 | | 12 | 12 | | 9 | 9 | | 9 | 9 | | 5 | 5 | | 7 | 7 | | 3 | 3 | 0 | 1 | 1 | | 2 | 2 | |
| 2 | ಬೆಂಗಳೂರು (ಗ್ರಾ) | 4 | 4 | | 4 | 4 | | 8 | 8 | | 7 | 7 | | 7 | 7 | | 4 | 4 | | 4 | 4 | | 4 | 4 | | 0 | 0 | | 4 | 4 | | 0 | 0 | | 0 | 0 | 0 | 0 | 0 | | 0 | 0 | |
| 3 | ರಾಮನಗರ | 6 | 6 | | 5 | 5 | | 12 | 10 | 2 | 8 | 8 | | 8 | 8 | | 4 | 4 | | 4 | 4 | | 4 | 4 | | 1 | 1 | | 2 | 2 | | 0 | 0 | | 1 | 1 | 0 | 0 | 0 | | 2 | 2 | |
| 4 | ಕೋಲಾರ | 7 | 5 | 2 | 8 | 8 | | 13 | 13 | | 10 | 9 | 1 | 10 | 9 | 1 | 8 | 8 | | 7 | 7 | | 7 | 7 | | 5 | 5 | | 3 | 3 | | 2 | 2 | | 1 | 1 | 0 | 1 | 0 | 1 | 2 | 1 | 1 |
| 5 | ಚಿಕ್ಕಬಳ್ಳಾಪುರ | 7 | 7 | | 7 | 7 | | 13 | 11 | 2 | 12 | 11 | 1 | 12 | 11 | 1 | 6 | 6 | | 9 | 8 | 1 | 6 | 5 | 1 | 1 | 1 | | 6 | 2 | 4 | 1 | 1 | | 1 | 1 | 0 | 1 | 1 | | 1 | 1 | |
| 6 | ತುಮಕೂರು | 12 | 11 | 1 | 12 | 12 | | 23 | 22 | 1 | 17 | 15 | 2 | 19 | 18 | 1 | 13 | 12 | 1 | 13 | 12 | 1 | 10 | 10 | | 6 | 6 | | 5 | 3 | 2 | 2 | 2 | | 1 | 1 | 0 | 1 | 1 | | 2 | 1 | 1 |
| 7 | ಚಿತ್ರದುರ್ಗ | 8 | 7 | 1 | 7 | 7 | | 20 | 17 | 3 | 19 | 13 | 6 | 19 | 10 | 9 | 7 | 7 | | 8 | 8 | | 6 | 4 | 2 | 6 | 6 | | 1 | 1 | | 2 | 2 | | 1 | 1 | 0 | 1 | 1 | | 2 | 2 | |
| 8 | ದಾವಣಗೆರೆ | 8 | 8 | | 8 | 8 | | 15 | 13 | 2 | 11 | 9 | 2 | 12 | 11 | 1 | 8 | 8 | | 7 | 7 | | 6 | 6 | | 5 | 5 | | 1 | 1 | | 2 | 2 | | 1 | 1 | 0 | 1 | 1 | | 0 | 0 | |
| 9 | ಶಿವಮೊಗ್ಗ | 9 | 9 | | 8 | 7 | 1 | 17 | 13 | 4 | 16 | 11 | 5 | 16 | 10 | 6 | 7 | 5 | 2 | 6 | 5 | 1 | 6 | 5 | 1 | 5 | 3 | 2 | 2 | 2 | | 2 | 2 | | 1 | 1 | 0 | 1 | 1 | | 1 | 0 | 1 |
| 10 | ಮೈಸೂರು | 7 | 7 | | 7 | 7 | | 22 | 20 | 2 | 21 | 20 | 1 | 19 | 15 | 4 | 7 | 7 | | 8 | 8 | | 7 | 7 | | 7 | 7 | | 5 | 5 | | 2 | 2 | | 1 | 1 | 0 | 1 | 1 | | 0 | 0 | |
| 11 | ಮಂಡ್ಯ | 6 | 6 | | 6 | 6 | | 18 | 17 | 1 | 16 | 11 | 5 | 16 | 11 | 5 | 6 | 5 | 1 | 7 | 7 | | 6 | 6 | | 3 | 3 | | 0 | 0 | | 0 | 0 | | 0 | 0 | 0 | 0 | 0 | | 0 | 0 | |
| 12 | ಚಾಮರಾಜ ನಗರ | 3 | 2 | 1 | 3 | 2 | 1 | 12 | 11 | 1 | 11 | 9 | 2 | 10 | 4 | 6 | 4 | 4 | | 5 | 5 | | 3 | 3 | | 1 | 0 | 1 | 2 | 2 | | 1 | 0 | 1 | 1 | 1 | 0 | 1 | 1 | | 2 | 0 | 2 |
| 13 | ಕೊಡಗು/ ಮಡಿಕೇರಿ | 7 | 4 | 3 | 10 | 9 | 1 | 14 | 8 | 6 | 12 | 2 | 10 | 11 | 2 | 9 | 4 | 3 | 1 | 4 | 3 | 1 | 3 | 3 | | 2 | 2 | | 3 | 3 | | 2 | 1 | 1 | 1 | 1 | 0 | 1 | 1 | | 0 | 0 | |
| 14 | ಹಾಸನ | 8 | 4 | 4 | 9 | 9 | | 25 | 16 | 9 | 24 | 9 | 15 | 23 | 7 | 16 | 7 | 6 | 1 | 8 | 8 | | 6 | 6 | | 4 | 3 | 1 | 3 | 3 | | 1 | 1 | | 1 | 1 | 0 | 0 | 0 | | 0 | 0 | |
| 15 | ಚಿಕ್ಕಮಗಳೂರು | 8 | 8 | | 7 | 7 | | 14 | 12 | 2 | 15 | 11 | 4 | 12 | 8 | 4 | 8 | 8 | | 6 | 6 | | 6 | 6 | | 2 | 2 | | 6 | 3 | 3 | 2 | 2 | | 1 | 1 | 0 | 0 | 0 | | 2 | 1 | 1 |
| 16 | ಉಡುಪಿ | 4 | 4 | | 5 | 5 | | 12 | 12 | | 10 | 9 | 1 | 10 | 10 | | 4 | 3 | 1 | 3 | 3 | | 2 | 2 | | 1 | 1 | | 3 | 3 | | 2 | 1 | 1 | 1 | 1 | 0 | 1 | 1 | | 0 | 0 | |
| 17 | ದಕ್ಷಿಣ ಕನ್ನಡ | 8 | 8 | | 9 | 9 | | 14 | 7 | 7 | 13 | 11 | 2 | 13 | 12 | 1 | 6 | 6 | | 6 | 6 | | 6 | 6 | | 2 | 2 | | 2 | 1 | 1 | 1 | 1 | | 1 | 1 | 0 | 1 | 1 | | 1 | 1 | |
| 18 | ಬೆಳಗಾವಿ | 11 | 7 | 4 | 12 | 7 | 5 | 31 | 20 | 11 | 27 | 9 | 18 | 27 | 16 | 11 | 11 | 11 | | 11 | 9 | 2 | 10 | 6 | 4 | 8 | 5 | 3 | 0 | 0 | | 0 | 0 | | 0 | 0 | 0 | 0 | 0 | | 0 | 0 | |
| 19 | ಕಾರವಾರ(ಉ.ಕ) | 13 | 6 | 7 | 13 | 11 | 2 | 16 | 7 | 9 | 14 | 5 | 9 | 15 | 7 | 8 | 11 | 8 | 3 | 12 | 10 | 2 | 11 | 9 | 2 | 11 | 3 | 8 | 2 | 0 | 2 | 2 | 1 | 1 | 1 | 1 | 0 | 1 | 1 | | 2 | 0 | 2 |
| 20 | ಧಾರವಾಡ | 6 | 6 | | 5 | 4 | 1 | 5 | 5 | | 4 | 3 | 1 | 4 | 3 | 1 | 5 | 5 | | 5 | 5 | | 4 | 3 | 1 | 1 | 1 | | 4 | 3 | 1 | 2 | 1 | 1 | 0 | 0 | 0 | 0 | 0 | | 0 | 0 | |
| 21 | ಗದಗ | 5 | 2 | 3 | 5 | 4 | 1 | 9 | 4 | 5 | 8 | 5 | 3 | 8 | 2 | 6 | 6 | 5 | 1 | 5 | 3 | 2 | 4 | 3 | 1 | 4 | 1 | 3 | 1 | 1 | | 2 | 2 | | 1 | 1 | 0 | 0 | 0 | | 0 | 0 | |
| 22 | ಹಾವೇರಿ | 9 | 7 | 2 | 12 | 11 | 1 | 22 | 14 | 8 | 17 | 13 | 4 | 21 | 16 | 5 | 9 | 8 | 1 | 9 | 9 | | 8 | 7 | 1 | 7 | 6 | 1 | 1 | 1 | | 2 | 2 | | 1 | 1 | 0 | 1 | 1 | | 0 | 0 | |
| 23 | ವಿಜಯಪುರ | 6 | 5 | 1 | 6 | 6 | | 17 | 8 | 9 | 16 | 5 | 11 | 15 | 8 | 7 | 6 | 6 | | 6 | 6 | | 5 | 4 | 1 | 5 | 1 | 4 | 1 | 1 | | 2 | 2 | | 1 | 1 | 0 | 1 | 0 | 1 | 2 | 1 | 1 |
| 24 | ಬಾಗಲಕೋಟೆ | 8 | 8 | | 9 | 9 | | 19 | 12 | 7 | 17 | 11 | 6 | 16 | 8 | 8 | 7 | 7 | | 7 | 7 | | 6 | 4 | 2 | 6 | 4 | 2 | 2 | 2 | | 2 | 1 | 1 | 1 | 1 | 0 | 1 | 1 | | 2 | 1 | 1 |
| 25 | ಕಲಬುರಗಿ | 15 | 8 | 7 | 13 | 12 | 1 | 36 | 21 | 15 | 28 | 17 | 11 | 30 | 11 | 19 | 10 | 10 | | 12 | 8 | 4 | 9 | 9 | | 7 | 2 | 5 | 3 | 3 | | 4 | 4 | | 2 | 2 | 0 | 1 | 0 | 1 | 3 | 0 | 3 |
| 26 | ಯಾದಗಿರಿ | 3 | 1 | 2 | 3 | 2 | 1 | 10 | 3 | 7 | 9 | 3 | 6 | 10 | 5 | 5 | 4 | 4 | | 3 | 3 | | 3 | 3 | | 2 | 1 | 1 | 1 | 1 | | 0 | 0 | | 1 | 1 | 0 | 1 | 0 | 1 | 0 | 0 | |
| 27 | ಬೀದರ್ | 4 | 4 | | 4 | 4 | | 15 | 7 | 8 | 15 | 10 | 5 | 14 | 8 | 6 | 4 | 2 | 2 | 4 | 4 | | 4 | 3 | 1 | 1 | 1 | | 3 | 3 | | 0 | 0 | | 0 | 0 | 0 | 0 | 0 | | 0 | 0 | |
| 28 | ರಾಯಚೂರು | 4 | 2 | 2 | 4 | 4 | | 10 | 7 | 3 | 10 | 5 | 5 | 10 | 4 | 6 | 4 | 3 | 1 | 4 | 3 | 1 | 4 | 2 | 2 | 2 | 1 | 1 | 1 | 1 | | 0 | 0 | | 0 | 0 | 0 | 0 | 0 | | 0 | 0 | |
| 90 | ಬಳ್ಳಾರಿ | 10 | 8 | 2 | 10 | 10 | | 28 | 20 | 8 | 23 | 13 | 10 | 22 | 12 | 10 | 9 | 4 | 5 | 8 | 7 | 1 | 8 | 6 | 2 | 6 | 2 | 4 | 1 | 1 | | 1 | 1 | | 1 | 1 | 0 | 0 | 0 | | 1 | 0 | 1 |
| 30 | ಕೊಪ್ಪಳ | 4 | 3 | 1 | 4 | 3 | 1 | 14 | 9 | 5 | 14 | 1 | 13 | 13 | 7 | 6 | 4 | 3 | 1 | 4 | 2 | 2 | 3 | 2 | 1 | 3 | 0 | 3 | 0 | 0 | | 1 | 1 | | 1 | 1 | 0 | 0 | 0 | | 0 | 0 | |
| | ಒಟ್ಟು | 229 | 186 | 43 | 234 | 218 | 16 | 514 | 377 | 137 | 442 | 283 | 159 | 444 | 282 | 162 | 203 | 182 | 21 | 207 | 189 | 18 | 176 | 154 | 22 | 123 | 84 | 39 | 73 | 60 | 13 | 47 | 41 | 6 | 27 | 27 | 0 | 18 | 14 | 4 | 27 | 13 | 14 |

ಅನುಬಂಧ - ೭ (56)

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಕೋವಿಡ್-19 ಪ್ರಕರಣಗಳ ಹಿನ್ನೆಲೆಯಲ್ಲಿ ರಾಜ್ಯದ ಜಿಲ್ಲಾ/ಜಿಲ್ಲಾ ಮಟ್ಟದ ಆಸ್ಪತ್ರೆಗಳಲ್ಲಿ ಸಮರ್ಪಕ ವೈದ್ಯಕೀಯ ಸೇವೆಗಳನ್ನು ಒದಗಿಸಲು ತಾತ್ಕಾಲಿಕವಾಗಿ 06 ತಿಂಗಳ ಮಟ್ಟಿಗೆ ಗುತ್ತಿಗೆ/ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಂಡಿರುವ ವೈದ್ಯರು/ ಸಿಬ್ಬಂದಿಗಳಿಗೆ ವೇತನವನ್ನು ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:-
1) ಸರ್ಕಾರದ ಆದೇಶ ಸಂಖ್ಯೆ:ಆಕುಕ 01 ಸಿ&ಆರ್ 2020, ದಿನಾಂಕ: 30.03.2020
2) ಸರ್ಕಾರದ ಆದೇಶ ಸಂಖ್ಯೆ: ಆಕುಕ 339 ಹೆಚ್‌ಎಸ್‌ಹೆಚ್ 2020, ದಿನಾಂಕ: 30.06.2020.
3) ಸರ್ಕಾರದ ಆದೇಶ ಸಂಖ್ಯೆ:ಆಕುಕ 01 ಸಿ&ಆರ್ 2020, ದಿನಾಂಕ: 14.07.2020
4) ಸರ್ಕಾರದ ಆದೇಶ ಸಂಖ್ಯೆ:ಆಕುಕ 01 ಸಿ&ಆರ್ 2020, ದಿನಾಂಕ: 14.07.2020
5) ಸರ್ಕಾರದ ಆದೇಶ ಸಂಖ್ಯೆ:ಆಕುಕ 130 ಎಫ್‌ಪಿಆರ್ 2020, ದಿನಾಂಕ: 15.07.2020
6) ಸರ್ಕಾರದ ಆದೇಶ ಸಂಖ್ಯೆ:ಆಕುಕ 01 ಸಿ&ಆರ್ 2020, ದಿನಾಂಕ: 21.07.2020
7) ಸರ್ಕಾರದ ಆದೇಶ ಸಂಖ್ಯೆ:ಆಕುಕ 01 ಸಿ&ಆರ್ 2020 (ಭಾಗ-1), ದಿನಾಂಕ: 24.07.2020
8) ಸರ್ಕಾರದ ಆದೇಶ ಸಂಖ್ಯೆ:ಆಕುಕ 01 ಸಿ&ಆರ್ 2020 (ಭಾಗ-1), ದಿನಾಂಕ: 30.07.2020

******

## ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ:1ರ ಸರ್ಕಾರದ ಆದೇಶದಲ್ಲಿ ಕೊರೋನಾ ವೈರಸ್ ಪ್ರಕರಣಗಳನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಸಮರ್ಪಕವಾಗಿ ನಿಭಾಯಿಸಲು 18 ಜಿಲ್ಲೆಗಳಿಗೆ, ಪ್ರತಿ ಜಿಲ್ಲೆಗೆ ವೈದ್ಯರು/ತಜ್ಞರು, ಶುಶ್ರೂಷಕರು, ಪ್ರಯೋಗಶಾಲಾ ತಂತ್ರಜ್ಞರು ಮತ್ತು ಗ್ರೂಪ್-ಡಿ ವೃಂದದ 45 ಹುದ್ದೆಗಳಂತೆ 810 ವೈದ್ಯ/ಸಿಬ್ಬಂದಿಗಳನ್ನು ತಾತ್ಕಾಲಿಕವಾಗಿ ಗರಿಷ್ಠ 6 ತಿಂಗಳ ಅವಧಿಗೆ ಗುತ್ತಿಗೆ/ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಆದೇಶಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ:2ರ ಸರ್ಕಾರದ ಆದೇಶದಲ್ಲಿ ಬೆಂಗಳೂರು ನಗರ / ಗ್ರಾಮಾಂತರ ಜಿಲ್ಲೆಯ ಒಟ್ಟು 12 ಆಸ್ಪತ್ರೆಗಳಿಗೆ ತಾತ್ಕಾಲಿಕವಾಗಿ 707 ವೈದ್ಯರು / ಸಿಬ್ಬಂದಿ ಹುದ್ದೆಗಳನ್ನು ನೇರ ಸಂದರ್ಶನದ ಮೂಲಕ ಗುತ್ತಿಗೆ ಆಧಾರದ ಮೇಲೆ 06 ತಿಂಗಳ ಅವಧಿಗೆ ನೇಮಕಾತಿ ಮಾಡಿಕೊಳ್ಳಲು ಅನುಮತಿ ನೀಡಲಾಗಿತ್ತು.

. . . . 2

ಮೇಲೆ ಓದಲಾದ ಕ್ರಮ ಸಂಖ್ಯೆ: 3ರ ಸರ್ಕಾರದ ಆದೇಶದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಪ್ರಸ್ತುತ ಖಾಲಿ ಹುದ್ದೆಗಳನ್ನು 06 ತಿಂಗಳ ಮಟ್ಟಿಗೆ ಅಥವಾ ನೇರ ನೇಮಕಾತಿ ಹುದ್ದೆಗಳು ಭರ್ತಿಯಾಗುವವರೆಗೆ ಇವುಗಳಲ್ಲಿ ಯಾವುದು ಮೊದಲು ಅಲ್ಲಿಯವರೆಗೆ ಶುಶ್ರೂಷಕರು, ಪ್ರಯೋಗಶಾಲಾ ತಂತ್ರಜ್ಞರು, ಫಾರ್ಮಾಸಿಸ್ಟ್, ಗ್ರೂಪ್-ಡಿ ಹುದ್ದೆಗಳನ್ನು ಗುತ್ತಿಗೆ / ಹೊರಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಿಕೊಳ್ಳಲು ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ: 4ರ ಸರ್ಕಾರದ ಆದೇಶದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆ ಅಡಿಯಲ್ಲಿ ಬರುವ ಕೋವಿಡ್ ಹೆಲ್ತ್ ಸೆಂಟರ್/ ಕೋವಿಡ್ ಆಸ್ಪತ್ರೆ ಮತ್ತು ಕೋವಿಡ್ ಕೇರ್ ಸೆಂಟರ್‌ಗಳಲ್ಲಿ ಕೋವಿಡ್-19ರ ಸಲುವಾಗಿ ಪಿ.ಪಿ.ಇ. ಕಿಟ್ ಧರಿಸಿ ಕಾರ್ಯ ನಿರ್ವಹಿಸುತ್ತಿರುವ ಗ್ರೂಪ್-ಡಿ ನೌಕರರುಗಳಿಗೆ ಮಾಸಿಕ ರೂ.10,000 (ಹತ್ತು ಸಾವಿರ ರೂಪಾಯಿಗಳು ಮಾತ್ರ) (Covid Risk Incentive) ನೀಡಲು ಅನುಮತಿ ನೀಡಲಾಗಿತ್ತು

ಮೇಲೆ ಓದಲಾದ ಕ್ರಮ ಸಂಖ್ಯೆ:5ರ ಸರ್ಕಾರದ ಆದೇಶದಲ್ಲಿ ಎನ್.ಐ.ವಿ. ಬೆಂಗಳೂರು ಮತ್ತು ನಿಮ್ಹಾನ್ಸ್ ಬೆಂಗಳೂರು ಇವುಗಳ ನಿಯಂತ್ರಣದಲ್ಲಿರುವ 03 ಪಾಳಿಯಲ್ಲಿ ಕಾರ್ಯ ನಿರ್ವಹಿಸಲು ಅನುವಾಗುಂತೆ ಮೈಕ್ರೋಬಯಾಲಜಿಸ್ಟ್-28 ಹುದ್ದೆಗಳು, ಪ್ರಯೋಗಶಾಲಾ ತಂತ್ರಜ್ಞರು -07 ಹುದ್ದೆಗಳು, ಡಾಟಾ ಎಂಟ್ರಿ ಆಪರೇಟರ್-31 ಹುದ್ದೆಗಳನ್ನು 06 ತಿಂಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ನೇಮಿಸಿಕೊಳ್ಳಲು ಅನುಮತಿ ನೀಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ:6ರ ಸರ್ಕಾರದ ಆದೇಶದಲ್ಲಿ ಇಲಾಖೆಯಲ್ಲಿನ 18 ಜಿಲ್ಲಾ /ಜಿಲ್ಲಾ ಮಟ್ಟದ ಆಸ್ಪತ್ರೆಗಳಿಗೆ ತಾತ್ಕಾಲಿಕವಾಗಿ 06 ತಿಂಗಳ ಅವಧಿಗೆ ಗುತ್ತಿಗೆ /ಹೊರಗುತ್ತಿಗೆ ಆಧಾರದ ಮೇಲೆ ನೇಮಕಗೊಳ್ಳುವ ವೈದ್ಯ/ಸಿಬ್ಬಂದಿಗೆ Covid Risk Incentive ನೀಡಲು ಅನುಮತಿ ನೀಡಲಾಗಿತ್ತು

ಮೇಲೆ ಓದಲಾದ ಕ್ರಮ ಸಂಖ್ಯೆ:7ರ ಸರ್ಕಾರದ ಆದೇಶದಲ್ಲಿ ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ಕೋವಿಡ್-19 ಸಾಂಕ್ರಾಮಿಕ ಸೋಂಕು ಹರಡುತ್ತಿರುವುದರಿಂದ ಮಾದರಿ ಸಂಗ್ರಹಿಸುವುದನ್ನು ಹೆಚ್ಚಿಸಲು ಹೆಚ್ಚುವರಿಯಾಗಿ 200 ಸಂಚಾರಿ ತಂಡಗಳನ್ನು ನಿಯೋಜಿಸಲಾಗುತ್ತಿದ್ದು, ಪ್ರತಿ ತಂಡಕ್ಕೆ ತಲಾ 02 ರಂತೆ 400 ಪ್ರಯೋಗಶಾಲಾ ತಂತ್ರಜ್ಞರು ಹಾಗೂ Fever Clinic / ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ 200 ಪ್ರಯೋಗಶಾಲಾ ತಂತ್ರಜ್ಞರನ್ನು 06 ತಿಂಗಳ ಅವಧಿಗೆ ತಾತ್ಕಾಲಿಕವಾಗಿ ಗುತ್ತಿಗೆ/ ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಲು ಅನುಮತಿ ನೀಡಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ:8ರ ಸರ್ಕಾರದ ಆದೇಶದಲ್ಲಿ ವಿವಿಧ ಜಿಲ್ಲೆಗಳಿಗೆ Rapid Antigen Tests (RAT) ಗಳನ್ನು ನಿಗಧಿಪಡಿಸಲಾದ ಗುರಿಯನ್ನು ಸಾಧಿಸಲು ಅನುವಾಗುವಂತೆ ಮಾದರಿ ಸಂಗ್ರಹಿಸುವುದನ್ನು ಹೆಚ್ಚಿಸಲು ಹೆಚ್ಚುವರಿಯಾಗಿ 700 ಪ್ರಯೋಗಶಾಲಾ ತಂತ್ರಜ್ಞರನ್ನು ಹಾಗೂ 700 ದತ್ತಾಂಶ ನಮೂದಕರನ್ನು 06 ತಿಂಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ತಾತ್ಕಾಲಿಕವಾಗಿ ಗುತ್ತಿಗೆ / ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲು ಅನುಮತಿ ನೀಡಲಾಗಿತ್ತು.

ಕೋವಿಡ್-19ರ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಕೊರೋನಾ ವೈರಸ್ ಪ್ರಕರಣಗಳನ್ನು ಸೂಕ್ತವಾಗಿ ನಿರ್ವಹಿಸುವ ಸಲುವಾಗಿ ತಾತ್ಕಾಲಿಕವಾಗಿ 06 ತಿಂಗಳ ಅವಧಿಗೆ ವೈದ್ಯರು / ಪೂರಕ ಸಿಬ್ಬಂದಿ ಹುದ್ದೆಗಳನ್ನು ನೇಮಿಸಿಕೊಳ್ಳಲು ಆರ್ಥಿಕ ಇಲಾಖೆಯ ಸಹಮತಿಯನ್ವಯ ಮೇಲ್ಕಂಡ ಆದೇಶಗಳನ್ನು ಹೊರಡಿಸಲಾಗಿತ್ತು. ಸದರಿ ಆದೇಶಗಳಿಗೆ

ಸಂಬಂಧಿಸಿದಂತೆ ವೈದ್ಯರು/ವೈದ್ಯೇತರ ಸಿಬ್ಬಂದಿಗಳಿಗೆ ವೇತನ/ಭತ್ಯೆಯನ್ನು ಯಾವ ಲೆಕ್ಕಶೀರ್ಷಿಕೆಯಿಂದ ಪಾವತಿಸಬೇಕೆಂಬುದರ ಕುರಿತು ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಿ ಈ ಕೆಳಕಂಡಂತೆ ಆದೇಶಿಸಲಾಗಿದೆ:-

**ಸರ್ಕಾರದ ಆದೇಶ ಸಂಖ್ಯೆ: ಆಕುಕ 01 ಸಿ&ಆರ್ 2020**

**ಬೆಂಗಳೂರು, ದಿನಾಂಕ: 05-08-2020**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಮೇಲೆ ಓದಲಾದ ಸರ್ಕಾರದ ಆದೇಶಗಳನ್ವಯ ತಾತ್ಕಾಲಿಕವಾಗಿ 06 ತಿಂಗಳ ಅವಧಿಗೆ ಗುತ್ತಿಗೆ/ಹೊರಗುತ್ತಿಗೆ ಆಧಾರದ ಮೇಲೆ ನೇಮಕಗೊಂಡಿರುವ ವೈದ್ಯ/ಸಿಬ್ಬಂದಿಗೆ ಲೆಕ್ಕ ಶೀರ್ಷಿಕೆ 2210-01-110-1-22(034) ರಡಿ ಲಭ್ಯವಿರುವ ಅನುದಾನದಲ್ಲಿ ವೇತನಗಳನ್ನು ಪಾವತಿಸುವಂತೆ ಆದೇಶಿಸಲಾಗಿದೆ.

ಅನುದಾನದ ಕೊರತೆ ಉಂಟಾದಲ್ಲಿ ಹೆಚ್ಚುವರಿ ಅನುದಾನವನ್ನು ಕೋರಿ ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಇವರ ಮೂಲಕ ಕ್ರೋಢೀಕೃತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ತಿಳಿಸಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ವೆಚ್ಚ 5/2020, ದಿನಾಂಕ:04.08.2020 ರಂದು ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಪತ್ರ ಶಾಖೆ ಹೊರಡಿಸಿದೆ
ದಿನಾಂಕ: 05/08/2020
ಸಹಿ:

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

5/8/2020
(ಕೆ. ಚಿರಂಜೀವಿ)
ಸರ್ಕಾರದ ಜಂಟಿ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಇವರಿಗೆ:

1) ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2) ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆನಂದರಾವ್ ವೃತ್ತ, ಬೆಂಗಳೂರು.
3) ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆನಂದರಾವ್ ವೃತ್ತ, ಬೆಂಗಳೂರು.
4) ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ, ಆನಂದರಾವ್ ವೃತ್ತ, ಬೆಂಗಳೂರು.
5) ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು (ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಇವರ ಮುಖಾಂತರ)
6) ರಾಜ್ಯದ ಎಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್‌ಗಳು (ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಇವರ ಮುಖಾಂತರ)
7) ರಾಜ್ಯದ ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು/ಜಿಲ್ಲಾ ಶಸ್ತ್ರ ಚಿಕಿತ್ಸಕರುಗಳು (ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಇವರ ಮುಖಾಂತರ)
8) ಮುಖ್ಯ ಆಡಳಿತಾಧಿಕಾರಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆನಂದರಾವ್ ವೃತ್ತ, ಬೆಂಗಳೂರು.
9) ಮುಖ್ಯ ಲೆಕ್ಕಾಧಿಕಾರಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆನಂದರಾವ್ ವೃತ್ತ, ಬೆಂಗಳೂರು.
10) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4 & 5), ವಿಧಾನ ಸೌಧ, ಬೆಂಗಳೂರು.
11) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

06/08/2020

ಪ್ರತಿಯನ್ನು:

1) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಆ.ಕು.ಕ. ಇಲಾಖೆ, ವಿಕಾಸ ಸೌಧ., ಬೆಂಗಳೂರು
2) ಸರ್ಕಾರದ ಜಂಟಿ ಕಾರ್ಯದರ್ಶಿ ರವರ ಆಪ್ತ ಸಹಾಯಕರು, ಆರೋಗ್ಯ ಮತ್ತು ಕು.ಕ. ಇಲಾಖೆ, ವಿಕಾಸ ಸೌಧ, ಬೆಂಗಳೂರು.

5/8/2020

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕರೋನ ವೈರಸ್ ಪ್ರಕರಣಗಳ ಹಿನ್ನೆಲೆಯಲ್ಲಿ ಬೆಂಗಳೂರು ನಗರದ ಜಿಲ್ಲಾ ಮಟ್ಟದ ಆಸ್ಪತ್ರೆಗಳನ್ನು ಬಲಪಡಿಸಿ ಸಮರ್ಪಕ ವೈದ್ಯಕೀಯ ಸೇವೆಗಳನ್ನು ಒದಗಿಸಲು ಅಗತ್ಯವಿರುವ ವೈದ್ಯರು/ಸಿಬ್ಬಂದಿಗಳನ್ನು ತಾತ್ಕಾಲಿಕವಾಗಿ 06 ತಿಂಗಳ ಮಟ್ಟಿಗೆ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳುವ ಬಗ್ಗೆ.

ಓದಲಾಗಿದೆ1 ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಇವರ ಪ್ರಸ್ತಾವನೆ ಏಕ ಕಡತ ಸಂಖ್ಯೆ:ಜೆಆರ್‌ಓ (1ಎ)/172/2019-20 (ಭಾಗ)

**ಪ್ರಸ್ತಾವನೆ:**

ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಕೋವಿಟ್-19 ಸೋಂಕಿತ ಪ್ರಕರಣಗಳು ಹೆಚ್ಚುತ್ತಿದ್ದು, ಅಧಿಕ ಸಂಖ್ಯೆಯಲ್ಲಿ ಕೋವಿಡ್-19 ರೋಗಿಗಳು ಜಿಲ್ಲಾ ಕೋವಿಡ್ ಹೆಲ್ತ್ ಕೇರ್ ಸೆಂಟರ್‌ಗಳಲ್ಲಿ ದಾಖಲಾಗುತ್ತಿರುವುದರಿಂದ ಅವರುಗಳ ಚಿಕಿತ್ಸೆಗೆ ಅನುವಾಗುವಂತೆ ಬೆಂಗಳೂರು ನಗರದ ಮತ್ತು ಗ್ರಾಮಾಂತರ ಜಿಲ್ಲೆಯ ಜಿಲ್ಲಾ ಮಟ್ಟದ 12 ಆಸ್ಪತ್ರೆಗಳನ್ನು ಬಲಪಡಿಸಿ ಸಮರ್ಪಕ ವೈದ್ಯಕೀಯ ಸೇವೆಗಳನ್ನು ಒದಗಿಸಲು ಅಗತ್ಯವಿರುವ ವೈದ್ಯರು/ಸಿಬ್ಬಂದಿಗಳನ್ನು ತಾತ್ಕಾಲಿಕವಾಗಿ ಗರಿಷ್ಠ 06 ತಿಂಗಳ ಮಟ್ಟಿಗೆ ಡಿಸೆಂಬರ್ 2020ರವರೆಗೆ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಅನುಮೋದನೆ ನೀಡುವಂತೆ ಹಾಗೂ ಸದರಿ ಆಸ್ಪತ್ರೆಗಳಿಗೆ 707 ವೈದ್ಯರು/ತಜ್ಞರು/ಸಿಬ್ಬಂದಿಗಳ ನೇಮಕಾತಿಗೆ ತಗಲುವ ರೂ.12,70,38,000/- ವೆಚ್ಚವನ್ನು ಲೆಕ್ಕ ಶೀರ್ಷಿಕೆ 2210-01-110-1-22 ರ ಉಪ ಲೆಕ್ಕ ಶೀರ್ಷಿಕೆ 034ರಡಿ ಭರಿಸುವುದಾಗಿ ತಿಳಿಸುತ್ತಾ, ಸದರಿ ಮೊತ್ತದ ಬಿಡುಗಡೆಗೆ ಅನುಮೋದನೆ ಕೋರಿ ಆಯುಕ್ತರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ್ದು, ಅದರಂತೆ ಈ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ: ಆಕುಕ 339 ಎಚ್‌ಎಸ್‌ಎಚ್ 2020 , ಬೆಂಗಳೂರು, ದಿನಾಂಕ:30.06.2020.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕೊರೋನ ವೈರಸ್ ಪ್ರಕರಣಗಳನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಸಮರ್ಪಕವಾಗಿ ನಿಭಾಯಿಸಲು ಬೆಂಗಳೂರ ನಗರದ ಮತ್ತು ಗ್ರಾಮಾಂತರ ಜಿಲ್ಲೆಯ ಒಟ್ಟು 12 ಆಸ್ಪತ್ರೆಗಳಿಗೆ ಈ ಕೆಳಕಂಡಂತೆ ತಾತ್ಕಾಲಿಕವಾಗಿ 707 ವೈದ್ಯ/ ಸಿಬ್ಬಂದಿಗಳ ಹುದ್ದೆಗಳನ್ನು ಗರಿಷ್ಠ 06 ತಿಂಗಳ ಅವಧಿಗೆ ನೇರ ಸಂದರ್ಶನದ ಮೂಲಕ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಅನುಮೋದನೆ ನೀಡಿದೆ.

| ಕ್ರ.ಸ | ಆಸ್ಪತ್ರೆಯ ವಿವರ | ವಿವಿಧ ವೃಂದ/ತಜ್ಞತೆಯ ಒಟ್ಟು ಹುದ್ದೆಗಳ ಸಂಖ್ಯೆ | ವಿವಿಧ ವೃಂದ/ತಜ್ಞತೆಯ ಹುದ್ದೆಗಳಿಗೆ 06 ತಿಂಗಳಿಗೆ ತಗಲುವ ವೆಚ್ಚ |
|---|---|---|---|
| 1 | ಸಾರ್ವಜನಿಕ ಆಸ್ಪತ್ರೆ, ಜಯನಗರ | 101 | ರೂ.14508000/- |
| 2 | ಕೆ.ಸಿ ಜನರಲ್ ಆಸ್ಪತ್ರೆ | 84 | ರೂ.14820000/- |
| 3 | ಸಾಂಕ್ರಾಮಿಕ ರೋಗಗಳ ಆಸ್ಪತ್ರೆ | 45 | ರೂ.5484000/- |
| 4 | ಸರ್.ಸಿ.ವಿ ರಾಮನ್ ಆಸ್ಪತ್ರೆ | 44 | ರೂ.4878000/- |

-------2

| | | | |
|---|---|---|---|
| 5 | ಕುಷ್ಟರೋಗ ಆಸ್ಪತ್ರೆ | 36 | ರೂ.8598000/- |
| 6 | ಸಾರ್ವಜನಿಕ ಆಸ್ಪತ್ರೆ, ಕೆ.ಆರ್ ಪುರಂ | 62 | ರೂ.11868000/- |
| 7 | ಸಾರ್ವಜನಿಕ ಆಸ್ಪತ್ರೆ, ಯಲಹಂಕ | 32 | ರೂ.9822000/- |
| 8 | ಸಾರ್ವಜನಿಕ ಆಸ್ಪತ್ರೆ, ಆನೇಕಲ್ | 54 | ರೂ.10566000/- |
| 9 | ಸಾರ್ವಜನಿಕ ಆಸ್ಪತ್ರೆ, ನೆಲಮಂಗಲ | 62 | ರೂ.11868000/- |
| 10 | ಸಾರ್ವಜನಿಕ ಆಸ್ಪತ್ರೆ, ದೊಡ್ಡಬಳ್ಳಾಪುರ | 62 | ರೂ.11868000/- |
| 11 | ಸಾರ್ವಜನಿಕ ಆಸ್ಪತ್ರೆ, ಹೊಸಕೋಟೆ | 43 | ರೂ.7146000/- |
| 12 | ಸಾರ್ವಜನಿಕ ಆಸ್ಪತ್ರೆ ದೇವನಹಳ್ಳಿ | 82 | ರೂ:15612000/- |

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: FD/950; ದಿನಾಂಕ:29-06-2020ರಲ್ಲಿ ನೀಡಿರುವ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಯ.ಶಿವಶಂಕರ) 30/6/2020
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಸೇವೆಗಳು)
30/06/2020

ಇವರಿಗೆ:

1. ಮಹಾಲೇಖಪಾಲಕರು(ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆನಂದ್‌ರಾವ್ ವೃತ್ತ,ಬೆಂಗಳೂರು
3. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಆನಂದರಾವ್ ವೃತ್ತ, ಬೆಂಗಳೂರು
4. ಜಿಲ್ಲಾಧಿಕಾರಿ, ಬೆಂಗಳೂರು ನಗರ /ಗ್ರಾಮಾಂತರ ಜಿಲ್ಲೆ.
5. ಸಂಬಂಧಿಸಿದ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್(ನಿರ್ದೇಶಕರ ಮುಖಾಂತರ)
6. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು,ಬೆಂಗಳೂರು ನಗರ/ಗ್ರಾಮಾಂತರ ಜಿಲ್ಲೆ.
7. ಮುಖ್ಯ ಆಡಳತಾಧಿಕಾರಿಗಳು ಆಯುಕ್ತರ ಕಛೇರಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಆನಂದ್‌ರಾವ್ ವೃತ್ತ ಬೆಂಗಳೂರು.
8. ಮುಖ್ಯ ಲೆಕ್ಕಾಧಿಕಾರಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತಾಲಯ, ಆನಂದ್‌ರಾವ್‌ವೃತ್ತ.
9. ಸಂಬಂಧಿಸಿದ ಆಸ್ಪತ್ರೆಗಳ ಆಡಳತ ವೈದ್ಯಾಧಿಕಾರಿಗಳು. (ನಿರ್ದೇಶಕರ ಮುಖಾಂತರ)
10. ಕಾರ್ಯದರ್ಶಿ(ವೆಚ್ಚ) ಆರ್ಥಿಕ ಇಲಾಖೆ, ವಿಧಾನ ಸೌಧ.

ಪ್ರತಿ ಮಾಹಿತಿಗಾಗಿ:

1. ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ.

-----3

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಕೋವಿಡ್-19ರ ಹಿನ್ನೆಲೆಯಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ಶುಶ್ರೂಷಕರು, ಲ್ಯಾಬ್ ಟೆಕ್ನೀಷಿಯನ್, ಫಾರ್ಮಾಸಿಸ್ಟ್ ಮತ್ತು ಗ್ರೂಪ್-ಡಿ ಹುದ್ದೆಗಳನ್ನು ಗುತ್ತಿಗೆ/ಹೊರಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡುವ ಬಗ್ಗೆ.

******

**ಪ್ರಸ್ತಾವನೆ:**

ರಾಜ್ಯಾದ್ಯಂತ ಕೊರೋನಾ ವೈರಸ್ ಪ್ರಕರಣಗಳು ದಿನೇ ದಿನೇ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಅರೆ ವೈದ್ಯಕೀಯ ಸಿಬ್ಬಂದಿಗಳ ಪಾತ್ರ ಮಹತ್ವದ್ದಾಗಿರುತ್ತದೆ. ಆದರೆ, ಪ್ರಸ್ತುತ ಇಲಾಖೆಯಲ್ಲಿ ಶುಶ್ರೂಷಕರು-1419, ಲ್ಯಾಬ್ ಟೆಕ್ನೀಷಿಯನ್-506, ಫಾರ್ಮಾಸಿಸ್ಟ್-916 ಹಾಗೂ ಗ್ರೂಪ್-ಡಿ ಹುದ್ದೆಗಳು ಖಾಲಿ ಇದ್ದು, ಈ ಹುದ್ದೆಗಳನ್ನು ಭರ್ತಿ ಮಾಡುವುದು ಅವಶ್ಯಕತೆ ಇರುತ್ತದೆ.

ಪ್ರಸ್ತುತ ಕೋವಿಡ್-19 ಸಾಂಕ್ರಾಮಿಕ ರೋಗ ನಿರ್ವಹಣೆಗಾಗಿ, ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳಿಗೆ ತಾತ್ಕಾಲಿಕವಾಗಿ ಗುತ್ತಿಗೆ/ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳುವುದು ಅತ್ಯವಶ್ಯಕವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಸಮರ್ಪಕ ವೈದ್ಯಕೀಯ ಸೇವೆಯನ್ನು ಒದಗಿಸಲು ಅನುಕೂಲವಾಗುವಂತೆ ಇಲಾಖೆಯಲ್ಲಿ ಖಾಲಿ ಇರುವ ಅರೆ ವೈದ್ಯಕೀಯ ಹುದ್ದೆಗಳಾದ ಶುಶ್ರೂಷಕರು, ಪ್ರಯೋಗಶಾಲಾ ತಂತ್ರಜ್ಞರು, ಫಾರ್ಮಾಸಿಸ್ಟ್ ಮತ್ತು ಗ್ರೂಪ್-ಡಿ ಹುದ್ದೆಗಳಲ್ಲಿ ಪ್ರಸ್ತುತ ಖಾಲಿ ಇರುವ ಎಲ್ಲಾ ಹುದ್ದೆಗಳನ್ನು ತಾತ್ಕಾಲಿಕವಾಗಿ 06 ತಿಂಗಳ ಮಟ್ಟಿಗೆ ಅಥವಾ ನೇರ ನೇಮಕಾತಿ ಮುಖೇನ ಹುದ್ದೆಗಳು ಭರ್ತಿಯಾಗುವವರೆಗೆ ಇವುಗಳಲ್ಲಿ ಯಾವುದು ಮೊದಲು ಅಲ್ಲಿಯವರೆಗೆ ಗುತ್ತಿಗೆ/ಹೊರ ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಿಕೊಳ್ಳಲು ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಲು ಸರ್ಕಾರವು ತೀರ್ಮಾನಿಸಿರುತ್ತದೆ. ಅದರಂತೆ ಈ ಆದೇಶ

**ಸರ್ಕಾರದ ಆದೇಶ ಸಂಖ್ಯೆ: ಆಕುಕ 01 ಸಿ&ಆರ್ 2020**
**ಬೆಂಗಳೂರು, ದಿನಾಂಕ: 14-07-2020**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ವ್ಯಾಪಕವಾಗಿ ಹೆಚ್ಚಾಗುತ್ತಿರುವ ಕೊರೋನಾ ವೈರಸ್ ಪ್ರಕರಣಗಳನ್ನು ಸಮರ್ಪಕವಾಗಿ ನಿಭಾಯಿಸಲು ಅನುಕೂಲವಾಗುವಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಪ್ರಸ್ತುತ ಖಾಲಿ ಇರುವ ಈ ಕೆಳಕಂಡ ವೃಂದದ ಎಲ್ಲಾ ಹುದ್ದೆಗಳನ್ನು ತಾತ್ಕಾಲಿಕವಾಗಿ 06 ತಿಂಗಳ ಮಟ್ಟಿಗೆ ಅಥವಾ ನೇರ ನೇಮಕಾತಿ ಹುದ್ದೆಗಳು ಭರ್ತಿಯಾಗುವವರೆಗೆ ಇವುಗಳಲ್ಲಿ ಯಾವುದು ಮೊದಲು ಅಲ್ಲಿಯವರೆಗೆ ಗುತ್ತಿಗೆ/ಹೊರಗುತ್ತಿಗೆ ಆಧಾರದ ಮೇಲೆ ತ್ವರಿತವಾಗಿ ಭರ್ತಿ ಮಾಡಿಕೊಳ್ಳಲು ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಿ ಆದೇಶಿಸಿದೆ.

| ಕ್ರ ಸಂ. | ಹುದ್ದೆಗಳ ವಿವರ | ಮಾಸಿಕ ವೇತನ | ನೇಮಕಾತಿ ವಿಧಾನ |
|---|---|---|---|
| 1 | ಶುಶ್ರೂಷಕರು | ರೂ.25,000/- | ಗುತ್ತಿಗೆ ಆಧಾರದ ಮೇಲೆ |
| 2 | ಪ್ರಯೋಗಶಾಲಾ ತಂತ್ರಜ್ಞರು | ರೂ.20,000/- | |
| 3 | ಫಾರ್ಮಾಸಿಸ್ಟ್ | ರೂ.20,000/- | |
| 4 | ಗ್ರೂಪ್-ಡಿ | ಚಾಲ್ತಿಯಿರುವ ವೇತನ (Existing Wages) ಆಧಾರದ ಮೇಲೆ. | ಹೊರಗುತ್ತಿಗೆ ಆಧಾರದ ಮೇಲೆ |

ಈ ಆದೇಶವನ್ನು ಆರ್ಥಿಕ ಇಲಾಖೆಯು ದಿನಾಂಕ:14/07/2020 ರಂದು ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಯ. ಶಿವಶಂಕರ್) 14/7/2020
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಸೇವೆಗಳು)

ಇವರಿಗೆ:

1) ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆನಂದರಾವ್ ವೃತ್ತ, ಬೆಂಗಳೂರು.
2) ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆನಂದರಾವ್ ವೃತ್ತ, ಬೆಂಗಳೂರು.
3) ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು (ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಇವರ ಮುಖಾಂತರ)
4) ರಾಜ್ಯದ ಎಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್‌ಗಳು (ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಇವರ ಮುಖಾಂತರ)
5) ರಾಜ್ಯದ ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು/ಜಿಲ್ಲಾ ಶಸ್ತ್ರ ಚಿಕಿತ್ಸಕರುಗಳು (ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಇವರ ಮುಖಾಂತರ)
6) ಮುಖ್ಯ ಆಡಳಿತಾಧಿಕಾರಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆನಂದರಾವ್ ವೃತ್ತ, ಬೆಂಗಳೂರು.
7) ಮುಖ್ಯ ಲೆಕ್ಕಾಧಿಕಾರಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆನಂದರಾವ್ ವೃತ್ತ, ಬೆಂಗಳೂರು.
8) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ–4 & 5), ವಿಧಾನ ಸೌಧ, ಬೆಂಗಳೂರು.
9) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಪ್ರತಿಯನ್ನು:

1) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಆ.ಕು.ಕ. ಇಲಾಖೆ, ವಿಕಾಸ ಸೌಧ., ಬೆಂಗಳೂರು
2) ಸರ್ಕಾರದ ಜಂಟಿ ಕಾರ್ಯದರ್ಶಿ ರವರ ಆಪ್ತ ಸಹಾಯಕರು, ಆರೋಗ್ಯ ಮತ್ತು ಕು.ಕ. ಇಲಾಖೆ, ವಿಕಾಸ ಸೌಧ, ಬೆಂಗಳೂರು.

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ನಿಯಂತ್ರಣದಲ್ಲಿರುವ ಪ್ರಯೋಗಾಲಯಗಳಿಗೆ ಮಾನವ ಸಂಪನ್ಮೂಲಗಳನ್ನು ನೇಮಿಸುವ ಬಗ್ಗೆ.

ಉಲ್ಲೇಖ: ಆಯುಕ್ತಾಲಯದ ಏಕ ಕಡತ ಸಂಖ್ಯೆ: DD/SSU/H.R.COVID LAB-41/2020-21.

---

ಮೇಲೆ ಓದಲಾದ ಏಕ ಕಡತದಲ್ಲಿ, ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ರವರು ರಾಜ್ಯದಲ್ಲಿ ಕೋವಿಡ್ -19 ಉಲ್ಬಣಿಸುತ್ತಿರುವ ಹಿನ್ನಲೆಯಲ್ಲಿ, ಹೆಚ್ಚಿನ ಕೋವಿಡ್ -19 ಪರೀಕ್ಷೆಗಳನ್ನು ಮಾಡುವ ಸಲುವಾಗಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಎನ್.ಐ.ವಿ, ಬೆಂಗಳೂರು ಮತ್ತು ನಿಮಾನ್ಸ್, ಬೆಂಗಳೂರು, ಇವುಗಳ ನಿಯಂತ್ರಣದಲ್ಲಿರುವ RT-PCR ಪ್ರಯೋಗಾಲಯಗಳಲ್ಲಿ 3 ಪಾಳಿಯಲ್ಲಿ ಕಾರ್ಯ ನಿರ್ವಹಿಸಲು 7 ಪ್ರಯೋಗಾಲಯ ತಂತ್ರಜ್ಞರು, 31 ಡಾಟಾ ಎಂಟ್ರಿ ಆಪರೇಟರ್ ಮತ್ತು 28 ಮೈಕ್ರೋಬಯಾಲಿಜಿಸ್ಟ್‌ಗಳ ಸೇವೆ ಅಗತ್ಯವಿರುವುದರಿಂದ ಆರು ತಿಂಗಳ ಮಟ್ಟಿಗೆ ತಾತ್ಕಾಲಿಕವಾಗಿ ರೂ. 1,18,44,000/- ವೆಚ್ಚದಲ್ಲಿ ನೇಮಕಾತಿ ಮಾಡಿಕೊಳ್ಳಲು ಅನುಮತಿ ಕೋರಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಆಕುಕ 130 ಎಫ್‌ಪಿಆರ್ 2020,

ಬೆಂಗಳೂರು, ದಿನಾಂಕ: 15 -7-2020

ರಾಜ್ಯದಲ್ಲಿ ಕೋವಿಡ್ -19 ಉಲ್ಬಣಿಸುತ್ತಿರುವ ಹಿನ್ನಲೆಯಲ್ಲಿ, ಹೆಚ್ಚಿನ ಕೋವಿಡ್ -19 ಪರೀಕ್ಷೆಗಳನ್ನು ಮಾಡುವ ಸಲುವಾಗಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಎನ್.ಐ.ವಿ, ಬೆಂಗಳೂರು ಮತ್ತು ನಿಮಾನ್ಸ್, ಬೆಂಗಳೂರು, ಇವುಗಳ ನಿಯಂತ್ರಣದಲ್ಲಿರುವ RT-PCR ಪ್ರಯೋಗಾಲಯಗಳಲ್ಲಿ 3 ಪಾಳಿಯಲ್ಲಿ ಕಾರ್ಯ ನಿರ್ವಹಿಸಲು ಅನುವಾಗುವಂತೆ ಈ ಕೆಳಕಂಡ ಮಾನವ ಸಂಪನ್ಮೂಲಗಳ ಸೇವೆಯನ್ನು ಆರು ತಿಂಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ನೇಮಿಸಿಕೊಳ್ಳಲು ಅನುಮೋದನೆ ನೀಡಲಾಗಿದೆ.

| ಕ್ರಮ ಸಂಖ್ಯೆ | ಹುದ್ದೆಯ ಹೆಸರು | ಒಟ್ಟು ಹುದ್ದೆ | ನಿಗಧಿಯಾದ ವೇತನ(ಮಾಸಿಕ) |
|---|---|---|---|
| 1. | ಮೈಕ್ರೋಬಯಾಲಿಜಿಸ್ಟ್ | 28 ಹುದ್ದೆ | ರೂ.50,000 |
| 2. | ಪ್ರಯೋಗಾಲಯ ತಂತ್ರಜ್ಞರು | 7 ಹುದ್ದೆ | ರೂ.20,000 |
| 3. | ಡಾಟಾ ಎಂಟ್ರಿ ಆಪರೇಟರ್ | 31 ಹುದ್ದೆ | ರೂ.14,000 |

ಈ ಆದೇಶವನ್ನು ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ: FD/2106/ACS/2020, dtd: 15-7-2020 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

V. Susheela 15/7/2020
(ವಿ.ಸುಶೀಲ)
ಸರ್ಕಾರದ ಉಪ ಕಾರ್ಯದರ್ಶಿ-2,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಇವರಿಗೆ:

1) ಪ್ರಧಾನಮಹಾಲೇಖಪಾಲರು (ಜಿ ಮತ್ತು ಎಸ್‌ಎಸ್‌ಎ) / ಇ ಮತ್ತು ಆರ್‌ಎಸ್ ಎ), ಹೊಸ ಕಟ್ಟಡ, ಆಡಿಟ್ ಭವನ, ಕರ್ನಾಟಕ, ಬೆಂಗಳೂರು.
2) ಪ್ರಧಾನಮಹಾಲೇಖಪಾಲರು (ಎ ಮತ್ತು ಇ ), ಕರ್ನಾಟಕ ಪಾರ್ಕ ಹೌಸ್, ರಸ್ತೆ, ಅಂಚೆ ಪೆಟ್ಟಿಗೆ-5329,ಕರ್ನಾಟಕ, ಬೆಂಗಳೂರು.
3) ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆನಂದರಾವ್ ವೃತ್ತ,, ಬೆಂಗಳೂರು.
4) ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ, ಆನಂದರಾವ್ ವೃತ್ತ, ಬೆಂಗಳೂರು.
5) ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆನಂದರಾವ್ ವೃತ್ತ,, ಬೆಂಗಳೂರು.
6) ಎಲ್ಲಾ ಜಿಲಾ ಶಸ್ತ್ರ ಚಿಕಿತ್ಸಕರು / ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು – ಆಯುಕ್ತಾಲಯದ ಮೂಲಕ
7) ಉಪ ನಿರ್ದೇಶಕರು (ಸಿ.ಎಂ.ಡಿ), ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆನಂದರಾವ್ ವೃತ್ತ,, ಬೆಂಗಳೂರು.
8) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-5), ವಿಧಾನಸೌಧ, ಬೆಂಗಳೂರು.
9) ಸರ್ಕಾರದ ಅಧೀನ ಕಾರ್ಯದರ್ಶಿ, ಆ.ಕು.ಕ.ಇಲಾಖೆ (ಸಿ ಅಂಡ್ ಆರ್/ಸೇವೆಗಳು/ ಸಮನ್ವಯ), ವಿಕಾಸಸೌಧ, ಬೆಂಗಳೂರು.
10) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** ಕೋವಿಡ್-19ರ ಹಿನ್ನಲೆಯಲ್ಲಿ ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿ ಹೆಚ್ಚುವರಿ ಪ್ರಯೋಗಶಾಲಾ ತಂತ್ರಜ್ಞರನ್ನು ತಾತ್ಕಾಲಿಕವಾಗಿ ಗುತ್ತಿಗೆ/ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡುವ ಬಗ್ಗೆ.

**ಓದಲಾಗಿದೆ:** ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ ಇವರ ಏಕ ಕಡತ ಸಂಖ್ಯೆ: SSU/COVID-19 /20/2020-21.

**ಪ್ರಸ್ತಾವನೆ:-**

ಮೇಲೆ ಓದಲಾದ ಏಕ ಕಡತದಲ್ಲಿ ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ ಇವರು ಕೋವಿಡ್-19 ಸಾಂಕ್ರಾಮಿಕ ಸೋಂಕು ಹರಡುತ್ತಿರುವ ಹಿನ್ನಲೆಯಲ್ಲಿ, ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ಮಾದರಿ ಸಂಗ್ರಹಿಸುವುದನ್ನು ಹೆಚ್ಚಿಸಲು ಹೆಚ್ಚುವರಿಯಾಗಿ ಪ್ರಯೋಗಶಾಲಾ ತಂತ್ರಜ್ಞರ ಅವಶ್ಯಕತೆ ಇರುತ್ತದೆ. ಇದಕ್ಕಾಗಿ 200 ಸಂಚಾರಿ ತಂಡಗಳನ್ನು ನಿಯೋಜಿಸಲಾಗುತ್ತಿದ್ದು, ಪ್ರತಿ ತಂಡಕ್ಕೆ ತಲಾ 02ರಂತೆ 400 ಪ್ರಯೋಗಶಾಲಾ ತಂತ್ರಜ್ಞರನ್ನು ಹಾಗೂ Fever clinic/ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಪ್ರಯೋಗಶಾಲಾ ತಂತ್ರಜ್ಞರ ಕೊರತೆ ಇದ್ದು, ಸದರಿ ಕೇಂದ್ರಗಳಿಗೆ 200 ಪ್ರಯೋಗಶಾಲಾ ತಂತ್ರಜ್ಞರನ್ನು ಮಾದರಿ ಸಂಗ್ರಹಿಸಲು 06 ತಿಂಗಳ ಅವಧಿಗೆ ತಾತ್ಕಾಲಿಕವಾಗಿ ಗುತ್ತಿಗೆ/ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಲು ಆಡಳಿತಾತ್ಮಕ ಅನುಮೋದನೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಆಕುಕ 01 ಸಿ&ಆರ್ 2020(ಭಾ-1)**
**ಬೆಂಗಳೂರು, ದಿನಾಂಕ:24-07-2020**

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ, ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ಕೋವಿಡ್-19 ಸಾಂಕ್ರಾಮಿಕ ಸೋಂಕು ಹರಡುತ್ತಿರುವುದರಿಂದ ಮಾದರಿ ಸಂಗ್ರಹಿಸುವುದನ್ನು ಹೆಚ್ಚಿಸಲು ಹೆಚ್ಚುವರಿಯಾಗಿ ಪ್ರಯೋಗಶಾಲಾ ತಂತ್ರಜ್ಞರ ಅವಶ್ಯಕತೆ ಇರುತ್ತದೆ. ಇದಕ್ಕಾಗಿ 200 ಸಂಚಾರಿ ತಂಡಗಳನ್ನು ನಿಯೋಜಿಸಲಾಗುತ್ತಿದ್ದು, ಪ್ರತಿ ತಂಡಕ್ಕೆ ತಲಾ 02ರಂತೆ 400 ಪ್ರಯೋಗಶಾಲಾ ತಂತ್ರಜ್ಞರನ್ನು ಹಾಗೂ Fever clinic/ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಪ್ರಯೋಗಶಾಲಾ ತಂತ್ರಜ್ಞರ ಕೊರತೆ ಇದ್ದು, ಸದರಿ ಕೇಂದ್ರಗಳಿಗೆ 200 ಪ್ರಯೋಗಶಾಲಾ ತಂತ್ರಜ್ಞರನ್ನು ಮಾದರಿ ಸಂಗ್ರಹಿಸಲು 06 ತಿಂಗಳ ಅವಧಿಗೆ ತಾತ್ಕಾಲಿಕವಾಗಿ ಗುತ್ತಿಗೆ/ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಸದರಿಯವರಿಗೆ ಮಾಸಿಕ ಸಂಭಾವನೆ ರೂ.15,000+ ಹೆಚ್ಚುವರಿಯಾಗಿ ಮಾಸಿಕ ರೂ.5,000/- ಕೋವಿಡ್ ಭತ್ಯೆ ನಿಗದಿಪಡಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ/2194/ACS/2020, ದಿನಾಂಕ:24.07.2020ರಲ್ಲಿ ನೀಡಿರುವ ಸಹಮತಿಯನುಸಾರ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

V. Susheela 24/7/2020

**(ವಿ.ಸುಶೀಲ)**
ಸರ್ಕಾರದ ಉಪ ಕಾರ್ಯದರ್ಶಿ-2,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು, (ಜಿ & ಎಸ್.ಎಸ್.ಎ) (ಇ & ಆರ್.ಎಸ್.ಎ) ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು,/ಬಿ.ಬಿ.ಎಂ.ಪಿ, ಬೆಂಗಳೂರು.
3. ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ, ಆನಂದರಾವ್ ವೃತ್ತ ಬೆಂಗಳೂರು.
4. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆನಂದರಾವ್ ವೃತ್ತ ಬೆಂಗಳೂರು.
5. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
6. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ 4&5), ವಿಧಾನಸೌಧ, ಬೆಂಗಳೂರು.
7. ಶಾಖಾ ರಕ್ಷಾ ಕಡತ; ಹೆಚ್ಚು ಪ್ರತಿಗಳು.

ಪ್ರತಿ:

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಪತ್ರಾಂಕಿತ ಆಪ್ತ ಸಹಾಯಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು.
2. ಸರ್ಕಾರದ ಜಂಟಿ ಕಾರ್ಯದರ್ಶಿ/ಉಪ ಕಾರ್ಯದರ್ಶಿಗಳು-2, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳುರು.

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕರೋನ ವೈರಸ್ ಪ್ರಕರಣಗಳ ಹಿನ್ನಲೆಯಲ್ಲಿ ಜಿಲ್ಲಾ ಆಸ್ಪತ್ರೆಗಳನ್ನು ಬಲಪಡಿಸಿ ಸಮರ್ಪಕ ವೈದ್ಯಕೀಯ ಸೇವೆಗಳನ್ನು ಒದಗಿಸಲು ಅಗತ್ಯವಿರುವ ಹೆಚ್ಚುವರಿ ಸಿಬ್ಬಂದಿಗಳನ್ನು ತಾತ್ಕಾಲಿಕವಾಗಿ 6 ತಿಂಗಳ ಮಟ್ಟಿಗೆ ಗುತ್ತಿಗೆ/ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳುವ ಬಗ್ಗೆ.

ಓದಲಾಗಿದೆ: ಆಯುಕ್ತರು ಆಕುಕ ಇವರ ಪ್ರಸ್ತಾವನೆ ಏಕ ಕಡತ ಸಂಖ್ಯೆ: ಮುಆ/ಆಪ್ತ/01/1/2019-20.

ಪ್ರಸ್ತಾವನೆ:-

ರಾಜ್ಯಾದ್ಯಂತ ಕೊರೋನಾ ವೈರಸ್ ಪ್ರಕರಣಗಳು ದಿನೇ ದಿನೇ ಹೆಚ್ಚಾಗುತ್ತಿರುವ ಹಿನ್ನಲೆಯಲ್ಲಿ, ಆಸ್ಪತ್ರೆಗಳಲ್ಲಿನ ಇನ್‌ಸೆಂಟಿವ್ ವಾರ್ಡ್ ಹಾಗೂ ಐಸೋಲೇಷನ್ ವಾರ್ಡ್‌ಗಳಲ್ಲಿ ದಿನದ 24 ಗಂಟೆಗಳೂ ಕೋವಿಡ್ ಶಂಕಿತರು ಹಾಗೂ ಸೋಂಕಿತರ ನಿಗಾವಣೆಗಾಗಿ ಪಾಳಿಯಲ್ಲಿ ಕರ್ತವ್ಯ ನಿರ್ವಹಿಸಲು ಒಂದು ತಂಡದಲ್ಲಿ 10 ಸಿಬ್ಬಂದಿಗಳ ಅವಶ್ಯಕತೆ ಇರುತ್ತದೆ. ಇಲಾಖೆಯಲ್ಲಿ ಶೇ.30 ರಷ್ಟು ಹುದ್ದೆಗಳು ಖಾಲಿ ಇದ್ದು, ಆಸ್ಪತ್ರೆಗಳಲ್ಲಿ ಪ್ರಸ್ತುತ ಸಾಂಕ್ರಾಮಿಕ ನಿರ್ವಹಣೆಗಾಗಿ ಹೆಚ್ಚುವರಿ ಸಿಬ್ಬಂದಿಯನ್ನು ತಾತ್ಕಾಲಿಕವಾಗಿ ಗುತ್ತಿಗೆ/ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳುವುದು ಅತ್ಯವಶ್ಯಕವಾಗಿರುತ್ತದೆ. ಈ ಹಿನ್ನಲೆಯಲ್ಲಿ ವಿಷಯವನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಆಕುಕ 1 ಸಿ & ಆರ್ 2020, ಬೆಂಗಳೂರು, ದಿನಾಂಕ:30.03.2020

ಮೇಲೆ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ ಕೊರೋನಾ ವೈರಸ್ ಪ್ರಕರಣಗಳನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಸಮರ್ಪಕವಾಗಿ ನಿಭಾಯಿಸಲು 18 ಜಿಲ್ಲೆಗಳಿಗೆ, ಪ್ರತಿ ಜಿಲ್ಲೆಗೆ ಈ ಕೆಳಕಂಡಂತೆ ತಾತ್ಕಾಲಿಕವಾಗಿ 45 ಹುದ್ದೆಗಳನ್ನು ಗರಿಷ್ಟ 6 ತಿಂಗಳ ಅವಧಿಗೆ ನೇಮಕ ಮಾಡಿಕೊಳ್ಳಲು ಮಂಜೂರಾತಿ ನೀಡಿದೆ.

| ಕ್ರಮ ಸಂ | ಹುದ್ದೆಯ ವಿವರ | ಪ್ರತಿ ಜಿಲ್ಲಾ ಆಸ್ಪತ್ರೆಗೆ | ಒಟ್ಟು 18 ಆಸ್ಪತ್ರೆಗಳಿಗೆ | ವೇತನ ಪ್ರತಿ ತಿಂಗಳು | ರೂ.ಗಳಲ್ಲಿ 6-ತಿಂಗಳಿಗೆ | ನೇಮಕಾತಿ ವಿಧಾನ |
|---|---|---|---|---|---|---|
| 1 | ವೈದ್ಯರು/ತಜ್ಞರು | 10 | 180 | 60000 | 6,48,00,000 | ಗುತ್ತಿಗೆ |
| 2 | ಶುಶ್ರೂಷಕರು | 20 | 360 | 20000 | 4,32,00,000 | |
| 3 | ಪ್ರಯೋಗ ಶಾಲಾತಂತ್ರಜ್ಞರು | 5 | 90 | 15000 | 81,00,000 | ಗುತ್ತಿಗೆ/ ಹೊರಗುತಿಗೆ |
| 4 | ಗ್ರೂಪ್-ಡಿ | 10 | 180 | 12000 | 1,29,60,000 | |
| ಒಟ್ಟು | | 45 | 810 | 1,07,000 | 12,90,60,000 | |

ಟಿಪ್ಪಣಿ ಸಂಖ್ಯೆ: ಆಇ 117 ವೆಚ್ಚ-5 2019, ದಿನಾಂಕ: 30.03.2020ರಲ್ಲಿ ಆರ್ಥಿಕ ಇಲಾಖೆಯು ಸಹಮತಿಸಿರುವಂತೆ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎನ್.ಲಕ್ಷ್ಮಣ)
ಸರ್ಕಾರದ ಉಪ ಕಾರ್ಯದರ್ಶಿ-1,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಪುಸ್ತಕ ಶಾಖೆ ಹೊರಡಿಸಿದೆ
ದಿನಾಂಕ: 21/04/2020

O/C

ಇವರಿಗೆ:-

1. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆನಂದ ರಾವ್ ವೃತ್ತ, ಬೆಂಗಳೂರು.
2. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆನಂದ ರಾವ್ ವೃತ್ತ, ಬೆಂಗಳೂರು.
3. ಎಲ್ಲಾ ಜಿಲ್ಲಾಧಿಕಾರಿಗಳು. (ನಿರ್ದೇಶಕರು, ಆ.ಕು.ಕ. ಸೇವೆಗಳು ಇವರ ಮುಖಾಂತರ)
4. ಎಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್‌ಗಳು. (ನಿರ್ದೇಶಕರ ಮುಖಾಂತರ)
5. ಎಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು. (ನಿರ್ದೇಶಕರು ಆ.ಕು.ಕ. ಸೇವೆಗಳು ಮುಖಾಂತರ)
6. ಮುಖ್ಯ ಆಡಳತಾಧಿಕಾರಿ, ಆಯುಕ್ತರ ಕಛೇರಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
7. ಮುಖ್ಯ ಲೆಕ್ಕಾಧಿಕಾರಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಯುಕ್ತಾಲಯ.
8. ಕಾರ್ಯದರ್ಶಿ (ವೆಚ್ಚ) ಆರ್ಥಿಕ ಇಲಾಖೆ, ವಿಧಾನ ಸೌಧ.

ಪ್ರತಿ:

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಅವರ ಆಪ್ತ ಶಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು.

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕೋವಿಡ್-19 ಸಾಂಕ್ರಾಮಿಕ ನಿರ್ವಹಣೆಗಾಗಿ ಜಿಲ್ಲಾ ವ್ಯಾಪ್ತಿಯಲ್ಲಿ ಹೆಚ್ಚುವರಿ ಪ್ರಯೋಗಶಾಲಾ ತಂತ್ರಜ್ಞ ಮತ್ತು ದತ್ತಾಂಶ ನಮೂದಕರನ್ನು (Data Entry Operators) ತಾತ್ಕಾಲಿಕವಾಗಿ ಗುತ್ತಿಗೆ/ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡುವ ಬಗ್ಗೆ.

**ಓದಲಾಗಿದೆ:** 1.ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ ಇವರ ಏಕ ಕಡತ ಸಂಖ್ಯೆ: SSU/COVID-19 /20/2020-21.

2.ಸರ್ಕಾರಿ ಆದೇಶ ಸಂಖ್ಯೆ: ಆಕುಕ 01 ಸಿ&ಆರ್ 2020 (ಭಾ-1), ದಿ:24/07/2020

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರಮಾಂಕ (1)ರ ಏಕ ಕಡತದಲ್ಲಿ ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ ಇವರಿಂದ ಸ್ವೀಕೃತವಾದ ಪ್ರಸ್ತಾವನೆಯಂತೆ, ಕೋವಿಡ್-19 ಸಾಂಕ್ರಾಮಿಕ ಸೋಂಕು ಹರಡುತ್ತಿರುವ ಹಿನ್ನಲೆಯಲ್ಲಿ, ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ಮಾದರಿ ಸಂಗ್ರಹಿಸುವುದನ್ನು ಹೆಚ್ಚಿಸಲು ಹೆಚ್ಚುವರಿಯಾಗಿ 600 ಪ್ರಯೋಗಶಾಲಾ ತಂತ್ರಜ್ಞರನ್ನು 06 ತಿಂಗಳ ಅವಧಿಗೆ ತಾತ್ಕಾಲಿಕವಾಗಿ ಗುತ್ತಿಗೆ/ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಕ್ರಮಾಂಕ (2)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಅನುಮೋದನೆ ನೀಡಲಾಗಿರುತ್ತದೆ.

ಮುಂದುವರಿದು, ರಾಜ್ಯದಲ್ಲಿ ಕೋವಿಡ್-19 ಪರೀಕ್ಷೆಗಳನ್ನು ನಡೆಸುತ್ತಿರುವ ಸಂಬಂಧ ಮುಖ್ಯ ಕಾರ್ಯದರ್ಶಿಯವರು ತೆಗೆದುಕೊಂಡ ಪರಿಶೀಲನಾ ಸಭೆಯಲ್ಲಿ ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿ ಮಾದರಿ ಸಂಗ್ರಹಿಸಲು ಅನುಕೂಲವಾಗುವಂತೆ 600 ಪ್ರಯೋಗ ಶಾಲಾ ತಂತ್ರಜ್ಞರನ್ನು ನೇಮಿಸಿಕೊಂಡ ಮಾದರಿಯಲ್ಲಿಯೇ ವಿವಿಧ ಜಿಲ್ಲೆಗಳಿಗೆ ನಿಗದಿಪಡಿಸಲಾದ Rapid Antigen Tests (RAT)ಗಳನ್ನು ಮಾಡಲು ಹೆಚ್ಚುವರಿಯಾಗಿ ಪ್ರಯೋಗ ಶಾಲಾ ತಂತ್ರಜ್ಞರು ಹಾಗೂ ದತ್ತಾಂಶ ನಮೂದಕರನ್ನು (Data Entry Operators) ನೇಮಿಸಿಕೊಳ್ಳಲು ಕ್ರಮತೆಗೆದುಕೊಳ್ಳುವಂತೆ ಸೂಚನೆಯನ್ನು ನೀಡಿದ್ದು, ಅದರನ್ವಯ ವಿವಿಧ ಜಿಲ್ಲೆಗಳಿಗೆ ಅಗತ್ಯವಿರುವ 700 ಪ್ರಯೋಗಶಾಲಾ ತಂತ್ರಜ್ಞರು ಹಾಗೂ ತತ್ಸಮಾನ ಸಂಖ್ಯೆಯ ದತ್ತಾಂಶ ನಮೂದಕರನ್ನು ಗುತ್ತಿಗೆ/ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಆಕುಕ 01 ಸಿ&ಆರ್ 2020(ಭಾ-1)**
**ಬೆಂಗಳೂರು, ದಿನಾಂಕ:30.07.2020**

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನಲೆಯಲ್ಲಿ, ವಿವಿಧ ಜಿಲ್ಲೆಗಳಿಗೆ Rapid Antigen Tests (RAT)ಗಳನ್ನು ನಡೆಸಲು ನಿಗದಿಪಡಿಸಲಾದ ಗುರಿಯನ್ನು ಸಾಧಿಸಲು ಅನುವಾಗುವಂತೆ. ಮಾದರಿ ಸಂಗ್ರಹಿಸುವುದನ್ನು ಹೆಚ್ಚಿಸಲು ಹೆಚ್ಚುವರಿಯಾಗಿ ಈ ಕೆಳಕಂಡಂತೆ ಮಾನವ ಸಂಪನ್ಮೂಲಗಳ ಸೇವೆಯನ್ನು 6ತಿಂಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ನೇಮಿಸಿಕೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

| ಕ್ರ.ಸಂ | ಹುದ್ದೆಯ ಹೆಸರು | ಒಟ್ಟು ಹುದ್ದೆ | ನಿಗದಿಪಡಿಸಲಾದ ಸಂಭಾವನೆ |
|---|---|---|---|
| 1 | ಪ್ರಯೋಗಶಾಲಾ ತಂತ್ರಜ್ಞರು (Lab Technicians) | 700 | ರೂ. 10000 + ರೂ 15/-Per Swab Collection |
| 2 | ದತ್ತಾಂಶ ನಮೂದಕರು (Data Entry Operators) | 700 | ರೂ. 14000/- ಮಾಸಿಕ |

.....2

ಷರತ್ತು:-

1. ಪ್ರಥಮತಃ ಜಿಲ್ಲೆಗಳಲ್ಲಿ ಲಭ್ಯವಿರುವ ಪ್ರಯೋಗ ಶಾಲಾ ತಂತ್ರಜ್ಞರು ಮತ್ತು ದತ್ತಾಂಶ ನಮೂದಕರ ಸೇವೆಯನ್ನು ಉಪಯೋಗಿಸಿಕೊಳ್ಳತಕ್ಕದ್ದು, ಅಗತ್ಯವಿದ್ದಲ್ಲಿ ಜಿಲ್ಲೆಗಳ ಸಕ್ಷಮ ಪ್ರಾಧಿಕಾರದಿಂದ ಬೇಡಿಕೆಯನ್ನು ಸ್ವೀಕರಿಸಿದ ನಂತರದಲ್ಲಿ ಅಗತ್ಯಕನುಗುಣವಾಗಿ ಸದರಿ ಸೇವೆಗಳನ್ನು ಪಡೆಯಲು ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ಇವರು ಅನುಮತಿ ನೀಡತಕ್ಕದ್ದು.
2. ಮಾದರಿ ಸಂಗ್ರಹಿಸಲು ನೇಮಿಸಿಕೊಳ್ಳಲಾಗುವ ಪ್ರಯೋಗಶಾಲಾ ತಂತ್ರಜ್ಞರಿಗೆ ನಿಗದಿಪಡಿಸಲಾದ ವಿದ್ಯಾರ್ಹತೆಯನ್ನು ಸಡಿಲಿಸಿ, ಲಭ್ಯತೆಗನುಸಾರವಾಗಿ ನರ್ಸಿಂಗ್ ಮತ್ತು ಅರೆ ವೈದ್ಯಕೀಯ ಪದವೀಧರರು, ಡಿಪ್ಲೋಮೋದಾರರು ಮತ್ತು ವಿಜ್ಞಾನ ಪದವೀಧರರನ್ನು ನೇಮಿಸಿಕೊಳ್ಳಲು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ/2222/ACS/2020, ದಿನಾಂಕ:29.07.2020ರಲ್ಲಿ ನೀಡಿರುವ ಸಹಮತಿಯನುಸಾರ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

30/7/2020
(ವಿ. ಪದ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
(ಕುಟುಂಬ ಕಲ್ಯಾಣ)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,

30/7

ಇವರಿಗೆ:

1. ಪ್ರಧಾನ ಮಹಾಲೇಖಪಾಲರು, (ಜೆ & ಎಸ್.ಎಸ್ಎ) (ಇ & ಆರ್.ಎಸ್.ಎ) ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು.
3. ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ, ಆನಂದರಾವ್ ವೃತ್ತ ಬೆಂಗಳೂರು.
4. ಎಲ್ಲಾ ಜಿಲ್ಲಾಧಿಕಾರಿಗಳು/ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು- ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಇವರ ಮೂಲಕ.
5. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆನಂದರಾವ್ ವೃತ್ತ ಬೆಂಗಳೂರು.
6. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
7. ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು/ಎಲ್ಲಾ ಜಿಲ್ಲಾ ಶಸ್ತ್ರ ಚಿಕಿತ್ಸಕರು-ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಇವರ ಮೂಲಕ.
8. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ 4&5), ವಿಧಾನಸೌಧ, ಬೆಂಗಳೂರು.
9. ಶಾಖಾ ರಕ್ಷಾ ಕಡತ; ಹೆಚ್ಚು ಪ್ರತಿಗಳು.

ಪ್ರತಿ:

1. ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಪತ್ರಾಂಕಿತ ಆಪ್ತ ಸಹಾಯಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು.
3. ಸರ್ಕಾರದ ಜಂಟಿ ಕಾರ್ಯದರ್ಶಿ/ಉಪ ಕಾರ್ಯದರ್ಶಿಗಳು-2, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳುರು.